# ಸಮಾಜದಲ್ಲಿ ಪೊಲೀಸರ ಪಾತ್ರ

ಮೂಲಭೂತವಾಗಿ ರಾಷ್ಟ್ರವನ್ನು ಸೈನಿಕರು ಕಾಯುತ್ತಾರೆ, ಸಮಾಜವನ್ನು ಪೊಲೀಸರು ಕಾಯುತ್ತಾರೆ ಎನ್ನುವ ಮಾತಿದೆ. ಇವರಿಬ್ಬರೂ ದಿನದ 24 ಗಂಟೆಗಳ ಕಾಲ ಕರ್ತವ್ಯನಿರತರೇ ಆಗಿರುತ್ತಾರೆ. ಯಾವುದೇ ಕ್ಷಣದಲ್ಲಿ ಆದರೂ ಕರ್ತವ್ಯದ ಕರೆಗೆ ಓಗೊಟ್ಟು ಇವರು ಹೊರಡಬೇಕಾಗುತ್ತದೆ. ಸದಾ ಕಾಲವೂ ಇವರು ಸನ್ನದ್ಧ ಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ.

ಇಂದು ಬೆಳೆಯುತ್ತಿರುವ ಸಮಾಜದಲ್ಲಿ ಪೊಲೀಸರ ಜವಾಬ್ದಾರಿಗಳು ಕೂಡ ಹೆಚ್ಚಾಗುತ್ತಿವೆ. ಒಂದು ಸಮಾಜವು 3 ಹಂತಗಳಲ್ಲಿ ಬೆಳವಣಿಗೆ ಹೊಂದುತ್ತದೆ. ಪ್ರಾಥಮಿಕವಾಗಿ ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳು ಸೀಮಿತ ವ್ಯಾಪ್ತಿಯಲ್ಲಿರುತ್ತವೆ. ಸಂಪರ್ಕದ ಸಾಧ್ಯತೆಗಳು ಕಡಿಮೆ ಇರುತ್ತವೆ. ಅಂತಹ ಸಮಾಜದಲ್ಲಿ ಇರುವ ಸಂಪನ್ಮೂಲದಲ್ಲಿ ಬಹುಮಟ್ಟಿನ ತೃಪ್ತಿ ಇರುತ್ತದೆ. ತೃಪ್ತಿಗೆ ಸಿದ್ಧವಾದ ಸಮಾಜವು ಕೆಲವು ಮೌಲ್ಯಗಳಿಗೆ ಬದ್ಧವಾಗಿರುತ್ತದೆ. ಅದರ ಪರಿಣಾಮವಾಗಿ ಅವ್ಯವಹಾರಗಳು, ಅನೈತಿಕ ಚಟುವಟಿಕೆಗಳು, ಅಪರಾಧಿ ಮನೋಭಾವ ಮತ್ತು ಅಪರಾಧಿ ಪ್ರವೃತ್ತಿ ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಅಂತಹ ಸಮಾಜದಲ್ಲಿ ಪೊಲೀಸರ ಕಾರ್ಯನಿರ್ವಹಣೆ ತಕ್ಕ ಮಟ್ಟಿಗೆ ಇದ್ದರೆ ಸಾಕಾಗುತ್ತದೆ ಮತ್ತು ಮೌಲ್ಯಗಳು ಪೊಲೀಸರ ಕಾರ್ಯನಿರ್ವಹಣೆಗೆ ಸಾಕಷ್ಟು ಭದ್ರತೆಯನ್ನು ಒದಗಿಸುತ್ತವೆ.

ಈ ಹಂತವನ್ನು ದಾಟತೊಡಗಿದ ಸಮಾಜವು ಬೆಳವಣಿಗೆಯ ಪ್ರಕ್ರಿಯೆಗೆ ಹೆಚ್ಚು ಒಡ್ಡಿಕೊಳ್ಳುತ್ತಾ ಹೋಗುತ್ತದೆ. ಬೆಳೆಯತೊಡಗಿದ ಸಮಾಜದಲ್ಲಿ ಆರ್ಥಿಕ ಆಕಾಂಕ್ಷೆಗಳು ತೀವ್ರವಾಗಿರುತ್ತವೆ ಮತ್ತು ಅಂತಹ ಆರ್ಥಿಕ ಆಕಾಂಕ್ಷೆಗಳು ಸಾಮಾಜಿಕ ಮೌಲ್ಯಗಳನ್ನು ಮೀರಿ ಕಾರ್ಯನಿರ್ವಹಿಸತೊಡಗುತ್ತವೆ. ಸಂಪರ್ಕ ಜಾಲಗಳು ವ್ಯಾಪಕವಾಗಿ ಬಳಕೆಯಾಗುತ್ತವೆ. ಅಪರಾಧಿ ಮನೋಭಾವ ಮತ್ತು ಅಪರಾಧಿ ಪ್ರವೃತ್ತಿಯು ತೀವ್ರವಾಗಿದ್ದು ಸೂಕ್ಷ್ಮವೂ ಆಗಿರುತ್ತವೆ. ಇದನ್ನು ರೂಪಕಾತ್ಮಕವಾಗಿ ಹೇಳುವುದಾದರೆ ಬುದ್ಧಿವಂತರು ಇರುತ್ತಾರೆ. ಆದರೆ, ಬುದ್ಧಿವಂತಿಕೆಗಳು ಕೆಟ್ಟ ಕಾರ್ಯಗಳಿಗೆ ಬಳಕೆಯಾಗುವುದೂ ಹೆಚ್ಚಾಗಿರುತ್ತದೆ. ಇಂತಹ ಸಮಾಜದಲ್ಲಿ ಪೊಲೀಸರು ಬಲು

downloaded from: www.kpscvaani.com

ಕ್ರಿಯಾಶೀಲರೂ, ಸೂಕ್ಷ್ಮರೂ ಆಗಿದ್ದು ಸಮಾಜವು ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಲ್ಪಡುವಂತೆ ನೋಡಿಕೊಳ್ಳಬೇಕಾಗುತ್ತದೆ.

ಬೆಳವಣಿಗೆ ಹಂತ ಕ್ರಮಿಸಿದ ಬಳಿಸ ಸಮಾಜವು ಬೆಳೆದ ರೂಪದಲ್ಲಿ ಪ್ರಕಟವಾಗುತ್ತದೆ. ಆರ್ಥಿಕ ಸುಸ್ಥಿರತೆ ಮತ್ತು ಭದ್ರತೆ ಆ ಸಮಾಜದ ಲಕ್ಷಣವಾಗಿರುತ್ತದೆ. ಆದರೆ ಸಮಾಜವು ಸಂಪರ್ಕ ಸಾಧನಗಳನ್ನು ವಿವೇಕಯುತವಾಗಿ ಬಳಸಿಕೊಳ್ಳುತ್ತದೆ. ಸಮಾಜದಲ್ಲಿನ ಸ್ವಯಂ ಶಿಸ್ತುಕಂಡು ಬರುತ್ತದೆ. ಅಪರಾಧಿ ಮನೋಧರ್ಮ ಮತ್ತು ಅಪರಾಧಿ ಪ್ರವೃತ್ತಿಯು ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಸಮಾಜವು ಬೆಳಚಣಿಗೆ ಹೊಂದಿದಾಗ ಬುದ್ಧಿವಂತಿಕೆಗಳು ಪಕ್ವತೆಯೊಂದಿಗೆ ವಿವೇಚನೆಯ ರೂಪದಲ್ಲಿ ಪ್ರಕಟವಾಗುತ್ತದೆ. ಪ್ರಸ್ತುತ ಭಾರತೀಯ ಸಮಾಜವು ಒಂದು ಬೆಳೆಯುತ್ತಿರುವ ಸಮಾಜವಾಗಿದೆ. ಬೆಳೆಯುತ್ತಿರುವ ಸಮಾಜದ ಅಪರಾಧಿ ಪ್ರವೃತ್ತಿಗಳು ಜಾಸ್ತಿ ಇರುತ್ತವೆ. ಈ ಅಪರಾಧಿ ಪ್ರವೃತ್ತಿಯನ್ನು ಪೊಲೀಸರು 2 ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ.

ಅಪರಾಧಿಗಳ ನಿರ್ವಹಣೆ:- ಪೊಲೀಸರ ವಿಚಾರಕ್ಕೆ ಸಂಬಂಧಿಸಿದಂತೆ ಅಪರಾಧಿಗಳ ನಿರ್ವಹಣೆ ಎಂದರೆ, ಅದು ಅಪರಾಧಿಗಳನ್ನು ಪತ್ತೆ ಮಾಡಿ ಬಂಧಿಸಿ ನ್ಯಾಯಾಂಗದ ಸಮ್ಮುದಲ್ಲಿ ಹಾಜರುಪಡಿಸುವ ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿದೆ. ಪೊಲೀಸರು ಅಪರಾಧಿಗಳ ಕಾರ್ಯಚರಣೆಯಲ್ಲಿರುವಾಗ ಅಪರಾಧಿಗಳ ಪರವಾಗಿ ಬರುವ ನಾನಾ ರೀತಿಯ ಒತ್ತಡಗಳಿಗೆ ಪೊಲೀಸರು ಮಣಿಯುವುದು ಅದರಿಂದಾಗಿ ಕಾನೂನಿನ ಹೊರತಾಗಿಯೂ ಪೊಲೀಸರನ್ನು ಮಣಿಸುವ ಹಲವು ಸಾಧ್ಯತೆಗಳು ಪ್ರಬಲವಾಗುತ್ತವೆ. ಅಂತಹ ಸಂದರ್ಭದಲ್ಲಿ ಪೊಲೀಸರ ಮೂಲ ಕರ್ತವ್ಯವನ್ನೇ ನಿರ್ವಹಿಸಲು ಸಾಧ್ಯವಾಗದೆ, ಪೊಲೀಸರ ಮೇಲೆ ಸಮಾಜಕ್ಕಿರುವ ನಂಬಿಕೆಯು ಹೊರಟು ಹೋಗುತ್ತದೆ. ಇಂತಹ ಸ್ಥಿತಿಯಲ್ಲಿ ಪೊಲೀಸರ ಇಚ್ಚಾಶಕ್ತಿಯು ಬಹು ಪ್ರಧಾನವಾಗದೆ. ಒತ್ತಡಗಳಿಗೆ ಮಣಿಯದೆ ಇರುವ ಮನೋಧರ್ಮವನ್ನು ಪೊಲೀಸರು ಬೆಳೆಸಿಕೊಳ್ಳಬೇಕಾಗಿದೆ.

ಇನ್ನು ಕೆಲವು ಸಂದರ್ಭಗಳಲ್ಲಿ ಪೊಲೀಸರೇ ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ಮುಂದಾಗುವುದು. ಇದು ಹಲವು ಅಚಾತುರ್ಯಗಗಳನ್ನು ಉಂಟು ಮಾಡುತ್ತದೆ. ವ್ಯಕ್ತಿಗೆ ಇರುವ ಸಂವಿಧಾನಿಕ ಹಕ್ಕನ್ನು ಹರಣ ಮಾಡಿಬಿಡುತ್ತದೆ. ಶಿಕ್ಷೆ ಕೊಡುವುದಕ್ಕಾಗಿಯೇ

downloaded from: www.kpscvaani.com

ಇರುವ ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆ ಹೊರಟು ಹೋಗುತ್ತದೆ. ಆದ್ದರಿಂದ ಪೊಲೀಸರು ಕಾನೂನಿನ ಚೌಕಟ್ಟಿನಿಂದ ಆಚೆಗೆ ಹೋಗಿ ಶಿಕ್ಷೆ ಕೊಡುವ ಪದ್ಧತಿಯನ್ನು ಕೈ ಬಿಡಬೇಕು. ಅಪರಾಧಿಗಳನ್ನು ಹಿಡಿಯುವ ತೀವ್ರತೆಯಲ್ಲಿ ಕೆಲವೊಂದು ಸಂದರ್ಭದಲ್ಲಿ ನಿರಪರಾಧಿಗಳಿಗೆ ತೊಂದರೆ ಕೊಡುತ್ತಾರೆ. ಈ ಸಮಸ್ಯೆಯು ಬಹಳ ಸಂಕೀರ್ಣವಾದದ್ದು. ಪೊಲೀಸರು ಆರೋಪಿಗಳನ್ನು ಪತ್ತೆ ಮಾಡುವವರಾಗಿರುತ್ತಾರೆಯೇ ಹೊರತು ಅಪರಾಧಿಗಳನ್ನಲ್ಲ. ನ್ಯಾಯಾಲಯವು ಆರೋಪಿಯನ್ನು ಅಪರಾಧಿಯೆಂದು ಘೋಷಿಸುವ ತನಕ ಆತ ಆರೋಪಿಯಷ್ಟೇ ಆಗಿರುತ್ತಾನೆ. ಆದ್ದರಿಂದ ಪೊಲೀಸರು ಆರೋಪಿಯನ್ನು ಗುರುತಿಸುವಾಗ ಆತ ಖಂಡಿತವಾಗಿಯೂ ಅಪರಾಧಿಯಾಗಿದ್ದಾನೆಯೇ ಎಂಬುದನ್ನು ಬಹುಮಟ್ಟಿಗೆ ಊಹಾತ್ಮಕ ವಿಶೇಷ ತಜ್ಞತೆಯು ಬೇಕಾಗುತ್ತದೆ. ಪೊಲೀಸರಲ್ಲಿ ಮಾನವನ ವರ್ತನೆಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡುವ ಸಾಮರ್ಥ್ಯವಿರಬೇಕು. ಯಾವ ನಿರಪರಾಧಿಗಳಿಗೂ ತೊಂದರೆಯಾಗದಂತೆ ನೋಡಿಕೊಳ್ಳಬೇಕು.

ವ್ಯಕ್ತಿಗಳಲ್ಲಿ ಕಾಣಿಸುವ ಅಪರಾಧಿಕ ಮನೋಪ್ರವೃತ್ತಿಯೇ ಅವರನ್ನು ಅಪರಾಧಿ ಕಾರ್ಯಗಳಿಗೆ ಪ್ರಚೋದಿಸುತ್ತವೆ. ಆದ್ದರಿಂದ ಅಪರಾಧಿ ಮನೋಪ್ರವೃತ್ತಿಯನ್ನು ನಿವಾರಿಸಿದರೆ ಅಪರಾಧಗಳು ನಿಯಂತ್ರಣಕ್ಕೆ ಬರುತ್ತವೆ. ಅಪರಾಧಿ ಮನೋ ಪ್ರವೃತ್ತಿಯನ್ನು ನಿರ್ವಹಿಸುವ ಸಾಧನಗಳು ಕಾನೂನಿನ ಭಯ ಮತ್ತು ಕಾನೂನಿನ ಅರಿವು. ಕಾನೂನಿನ ಭಯವು ತನ್ನಲ್ಲಿ ಇರುವ ಅಪರಾಧಿ ಪ್ರವೃತ್ತಿ ಇದ್ದರೂ ಸಹ ಅಪರಾಧ ಮಾಡಲು ಮುನ್ನುಗ್ಗದಂತೆ ವ್ಯಕ್ತಿಯನ್ನು ತಡೆಯುತ್ತದೆ. ಕಾನೂನಿನ ಕುರಿತ ಭಯವು ಅಪರಾಧಿ ಮನೋಪ್ರವೃತ್ತಿಯವರು ಸಿಕ್ಕಿಬೀಳದಂತೆ ಹೆಚ್ಚು ಬುದ್ಧಿವಂತಿಕೆಯಿಂದ ಅಪರಾಧವನ್ನು ಮಾಡುವುದಕ್ಕೂ ಪ್ರೇರೇಪಿಸಬಹುದು. ಕಾನೂನಿನ ಅರಿವಿನಿಂದ ವ್ಯಕ್ತಿಯ ವ್ಯಕ್ತಿತ್ವವು ಉನ್ನತೀಕರಣಗೊಳ್ಳುತ್ತದೆ. ಉನ್ನತ ಮಟ್ಟದ ವ್ಯಕ್ತಿತ್ವವು ಅಪರಧವನ್ನು ಮಾಡಲು ಮನಸ್ಸು ಮಾಡುವುದಿಲ್ಲ. ಹೆಚ್ಚು ಕಡಿಮೆ ಇದು ಪೊಲೀಸರು ನಿರ್ವಹಿಸಬೇಕಾದ ಸಾಮಾಜಿಕ ಶಿಕ್ಷಣದ ಕಾರ್ಯವಾಗಿದೆ.

downloaded from: www.kpscvaani.com

ಪೊಲೀಸರು ಜನರ ವಿಶ್ವಾಸ ಪಡೆಯಬೇಕಾದರೆ ಪೊಲೀಸರು ಜನರನ್ನು ನೋಡುವ ಕ್ರಮವನ್ನು ಬದಲಾಯಿಸಿಕೊಳ್ಳಬೇಕು. ಉದಾಹರಣೆಗೆ ತೆಗೆದುಕೊಂಡರೆ ಒಬ್ಬ ವಾಹನ ಸವಾರ ಲೈಸೆನ್ಸ್ ಇಲ್ಲದೆ ವಾಹನ ಚಲಾಯಿಸುತ್ತಿರುವಾಗ ಪೊಲೀಸರು ಅವನನ್ನು ತಪಾಸಣೆ ನಡೆಸಲು ಶುರು ಮಾಡಿದರೆ ಕಾಲುಗಂಟೆ, ಅರ್ಧಗಂಟೆ ಅವನೊಂದಿಗೆ ವಾದ-ವಿವಾದ ಮಾಡಿಕೊಂಡಿರುತ್ತಾರೆ. ಅದೇ ವೇಳೆ ಮತ್ತೊಬ್ಬ ವಾಹನ ಸವಾರ ಬಂದು ತನ್ನೆಲ್ಲ ದಾಖಲೆಗಳನ್ನು ಪೊಲೀಸರಿಗೆ ತೋರಿಸಿದರೆ, ಕಾನೂನನ್ನು ಪಾಲಿಸಿದ ವಾಹನ ಸವಾರನಿಗೆ ಕಿಂಚಿತ್ತೂ ಮಹತ್ವವನ್ನು ನೀಡದೆ ಕಳಿಸಿಬಿಡುತ್ತಾರೆ. ಅಂದರೆ, ಕಾನೂನನ್ನು ಪಾಲಿಸುವವರು ಪೊಲೀಸರ ದೃಷ್ಟಿಯಲ್ಲಿ ಮಹತ್ವವನ್ನು ಕಳೆದುಕೊಳ್ಳುತ್ತಾರೆ ಎಂಬುದಾಗಿದೆ. ಯಾರು ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೋ ಅವರನ್ನು ಕಾನೂನನ್ನು ಪಾಲಿಸದೆ ಇರುವವನ ಎದುರಿಗೇ ಮೆಚ್ಚಿಕೊಂಡು ಅಭಿನಂದಿಸಿ ಗೌರವಯುತವಾಗಿ ಮಾತನಾಡಿಸಿ ಕಳುಹಿಸಬೇಕು. ಆಗ ಕಾನೂನನ್ನು ಪಾಲಿಸುವವನಿಗೆ ತಾನು ಕಾನೂನಿಗೆ ಬದ್ಧನಾಗಿದ್ದರೆ ಅದಕ್ಕೆ ಮೆಚ್ಚುಗೆಗಳು ಸಿಗುತ್ತವೆ ಎಂಬ ಸಂದೇಶ ರವಾನೆಯಾಗುತ್ತದೆ. ಪೊಲೀಸರೊಂದಿದೆ ವಿಶ್ವಾಸದಿಂದ ನಡೆದುಕೊಳ್ಳುತ್ತಾನೆ.

ಪೊಲೀಸರು ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಸಂಘ-ಸಂಸ್ಥೆಗಳು ಮುಂತಾದ ವೇದಿಕೆಗಳನ್ನು ಗಮನಕ್ಕೆ ತಂದುಕೊಳ್ಳಬೆಕು. ಅವುಗಳ ಮೂಲಕ ಕಾನೂನಿನ ಅರಿವು ಮತ್ತು ಮೌಲ್ಯಗಳ ಬದ್ಧತೆಯನ್ನು ಬೆಳೆಸುವ ತಿಳುವಳಿಕೆಗಳನ್ನು ನೀಡಬೇಕು. ಅಪರೂಪಕ್ಕೆ ಇಂತಹ ಕಾರ್ಯಗಳು ನಡೆಯುತ್ತವೆಯಾದರೂ ಅವು ಸಾಂಕೇತಿಕ ಉಪನ್ಯಾಸಕ್ಕೆ ಮುಕ್ತಾಯವಾಗುತ್ತವೆ. ವಾಸ್ತವಿಕವಾಗಿ ಅದು ಅನುಷ್ಠಾನಕ್ಕೆ ಬರುವಂತೆ ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಪೊಲೀಸ್ ಸ್ಟೇಷನ್‌ಗಳ ನಡುವಿನ ಬಾಂಧವ್ಯಗಳು ಸುಧಾರಿಸಬೇಕು.

ಒಟ್ಟಾರೆಯಾಗಿ ಹೇಳುವುದಾದರೆ ಬೆಳೆಯುತ್ತಿರುವ ಸಮಾಜದಲ್ಲಿ ಪೊಲೀಸರು ಕಾನೂನಿನ ಉಪಕರಣಗಳಾಗಿದ್ದರಷ್ಟೇ ಸಾಲದು, ವಿಶಾಲ ವ್ಯಾಪ್ತಿಯ ಸಾಮಾಜಿಕ

downloaded from: www.kpscvaani.com

ಹಿನ್ನೆಲೆಗಳನ್ನು ಅರ್ಥ ಮಾಡಿಕೊಂಡಿರುವ ಪ್ರಬುದ್ಧವಾಗಿ ಯೋಜನೆ ಮಾಡುವ ಕಾನೂನಿನ, ನ್ಯಾಯದ ಅರಿವು ಇರುವ ಸಂವೇದನಾಶೀಲ ವ್ಯಕ್ತಿಗಳಾಗಬೇಕು.

"ಜೈ ಹಿಂದ್"

**downloaded from: www.kpscvaani.com**